ರವರು ಎಸ್ಟಿಮೇಟ್ ಕಳುಹಿಸಿದ ತಕ್ಷಣ ಕೆಲಸ ತೆಗೆದುಕೊಳ್ಳಲಾಗುತ್ತದೆ. ಆಮೇಲೆ, 3 ವರ್ಷ ಗಳ ಹಿಂದೆ ನಡೆದ ಕಾಮಗಾರಿ ಕಳಪೆ ಮಟ್ಟದ್ದಾಗಿದೆಯೆಂದು ಸಹಾ ಹೇಳಿದ್ದಾರೆ, ಆದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸಿ ಆ ಕಳಪೆ ಕಾಮಗಾರಿಗೆ ಯಾರು ಕಾರಣರಾಗಿದ್ದಾರೆಂದು ವರದಿ ಕೊಡುತ್ತಾರೋ ಆದರ ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

**ಶ್ರೀ. ಕೆ. ಶರಣಪ್ಪ :-** ಮಾನ್ಯ ಅಧ್ಯಕ್ಷರೇ, 3 ವರ್ಷಗಳ ಹಿಂದೆ ಕಟ್ಟಿದ ಕಟ್ಟಡ ಕಳಪೆ ದರ್ಜೆಯಾದಾಗಿದ್ದು ಅದು ಬಿದ್ದು ಹೋಗುವ ಸ್ಥಿತಿಯಲ್ಲಿದೆ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ.

**ಡಾ. ಹೆಚ್. ಸಿ. ಮಹದೇವಪ್ಪ :-** ವರದಿ ಬಂದ ನಂತರ ಕ್ರಮ ತೆಗೆದುಕೊಳ್ಳುತ್ತೇವೆ.

**Sub: Shift up of Godrihal Village in Shorapur Taluk.**

Starred Question No. 318 (2727)

Sri Raja Venkatappa Naik (Shorapur) :-Will the Hon'ble Minister for Revenue be pleased to state.

a) Whether it has come to the notice of the Govt. that the GODRIHAL VILLAGE of Shorapur Taluk is suffering badly with the seepage water caused by the Surrounding Jainapur Nala due to Excessive UKP Canal Seepages;

b) If so, is there any proposal before the Government to shift the village to a higher place;

Sri R.L JALAPPA ( Minister for Revenue) :-

a) Yes

b) This is under examination.

**ಶ್ರೀ ರಾಜ ವೆಂಕಟಪ್ಪ ನಾಯಕ :-** ಮಾನ್ಯ ಅಧ್ಯಕ್ಷರೇ, ಸುರಪುರ ತಾಲ್ಲೂಕು ಗೋಧ್ರಿಹಾಳ ಗ್ರಾಮದಲ್ಲಿ , ಯು.ಕೆ.ಪಿ. ಯೋಜನೆಯಿಂದ ವಾಟರ್ ಸೀಪೇಜ್ ಆಗಿ ಪ್ರತಿ ಯೊಂದು ಮನೆಯಲ್ಲೂ ಫೌಂಟೇನ್ ತರಹ ನೀರು ಬರುತ್ತಿದೆ. ಇದರಿಂದ ಹೆಲ್ತ್ ಪ್ರಾಬ್ಲಮ್ ಕೂಡಾ ಬರುತ್ತಿದೆ. ಈ ವಿಲೇಜನ್ನು ಬೇರೆ ಕಡೆ ಶಿಫ್ಟ್ ಮಾಡುವ ಬಗ್ಗೆ ಆರೇಳು ವರ್ಷ ಗಳಿಂದ ಪ್ರಯತ್ನ ಮಾಡಲಾಗುತ್ತಿದೆ. ಈಗ ಕೊಟ್ಟಿರುವ ಉತ್ತರದಲ್ಲೂ ಹಳ್ಳಿಯನ್ನು ಶಿಫ್ಟ್ ಮಾಡುವ ಬಗ್ಗೆ ಅಂದರೆ ಎಕ್ಸಾಮಿನೇಷನ್ ಎಂದು ಹೇಳಿದ್ದಾರೆ. ಇದನ್ನು ಆದಷ್ಟು ಬೇಗ ಮಾಡಬೇಕೆಂದು ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಸಿ. ಭೈರೇಗೌಡ** (ಕಂದಾಯ ಮಂತ್ರಿಗಳ ಪರವಾಗಿ) :- ಮಾನ್ಯ ಅಧ್ಯಕ್ಷರೇ, ಆ ಗ್ರಾಮಕ್ಕೆ ನೀರು ನುಗ್ಗಿ ಬಸಿ ನೀರಿನಿಂದ ಜೌಗು ಉಂಟಾಗಿ ಮನುಷ್ಯರು ವಾಸ ಮಾಡುವುದಕ್ಕೆ ತೊಂದರೆಯಾಗಿರತಕ್ಕಂಥಾದ್ದು ನಿಜ. ಈ ಗ್ರಾಮವನ್ನು ಬೇರೆ ಕಡೆ ಶಿಫ್ಟ್ ಮಾಡುವುದಕ್ಕೆ 1 ಕೋಟಿ 27 ಲಕ್ಷ ರೂಪಾಯಿಗಳು ವಿಚ್ರಾಗುವ ಕಾರಣದಿಂದ ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿ ಕಾರ್ಯಕ್ರಮ ಮಾಡಲು ಸರ್ಕಾರ ಪರಿಶೀಲಿಸಲಾಗುತ್ತದೆಂದು ಉತ್ತರದಲ್ಲಿಯೂ ಸಹಾ ತಿಳಿಸಲಾಗಿದೆ. ಪುನಃ ನಾನು ಹೇಳುವುದೇನೆಂದರೆ, ಆದಷ್ಟು ಜಾಗ್ರತೆ ಇದಕ್ಕೆ ಏನು ಮಾಡುವುದಕ್ಕೆ ಸಾಧ್ಯ ಇದೆಯೋ ಅದನ್ನು ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ಆಶ್ವಾಸನೆ ಕೊಡಲಿಕ್ಕೆ ಇಷ್ಟಪಡುತ್ತೇನೆ.

**ಶ್ರೀ ರಾಜಾ ವೆಂಕಟಪ್ಪ ನಾಯಕ್** :- ಮಾನ್ಯ ಅಧ್ಯಕ್ಷರೆ, ಇದಕ್ಕಾಗಿ ಅಲ್ಲಿನ ಗ್ರಾಮ ಸ್ಥರೇ ಬೇರೆ ಕಡೆ ಭೂಮಿಯನ್ನು ವಾಲಂಟರಿಯಾಗಿ ಕೊಡಲಿಕ್ಕೆ ತಯಾರಿದ್ದಾರೆ. ಅದಕ್ಕೋಸ್ಕರ ಆದಷ್ಟು ಬೇಗ ಇದನ್ನು ಮಾಡಬೇಕು. ಇನ್ನು ಎಷ್ಟು ದಿವಸದಲ್ಲಿ ಈ ಕೆಲಸವನ್ನು ಮುಗಿಸುತ್ತೀರೆಂದು ತಿಳಿಸಬೇಕೆಂದು ಕೇಳುತ್ತೇನೆ.

**ಶ್ರೀ ಸಿ. ಭೈರೇಗೌಡ** :- ಮಾನ್ಯ ಅಧ್ಯಕ್ಷರೇ, ಸಮಯ ನಿರ್ಧಾರ ಮಾಡುವುದು ಕಷ್ಟವಾಗುತ್ತದೆ. ಗ್ರಾಮಸ್ಥರು ಭೂಮಿ ಕೊಡಲಿಕ್ಕೆ ತಯಾರಿದ್ದಾರೆಂದು ಮಾನ್ಯ ಸದಸ್ಯರು ಹೇಳಿರುವುದರಿಂದ ಈ ವಿಷಯವನ್ನು ಪರಿಗಣಿಸಲಾಗುತ್ತದೆ.

**ವಿಷಯ :- ಆರೋಗ್ಯ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿ.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 314 (2202)

ಶ್ರೀ ಅಮರೇಗೌಡ ಪಾಟೀಲ ಬಯ್ಯಾಪುರ (ಲಿಂಗಸುಗೂರು) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆರೋಗ್ಯ ಇಲಾಖೆಯಲ್ಲಿರುವ ವೈದ್ಯಾಧಿಕಾರಿಗಳು ಮತ್ತು ನರ್ಸ್ (ಎ.ಎನ್.ಎಂ) ಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾ, ತಾಲ್ಲೂಕುವಾರು ಮಾಹಿತಿ ನೀಡುವುದು.)

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಈ) ವಿಭಾಗ ಮಟ್ಟದಲ್ಲಿಯೇ ಭರ್ತಿಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಇಲ್ಲವಾದರೆ ಕಾರಣವೇನು?

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ವೈದ್ಯಾಧಿಕಾರಿಗಳು - 4130

ಕಿರಿಯ ಆರೋಗ್ಯ ಸಹಾಯಕಿ - 9554